ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ರವರ ನ್ಯಾಯಾಲಯ ತಿಪಟೂರು

ಸಿ.ಸಿ ನಂ. **1413/2017**

ಚಾಸಾಃ 5
ಫ್ರಾಸಾಃ 4

ದಿನಾಂಕಃ **27-02-2023** ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

| | | |
|---|---|---|
| ಸಾಕ್ಷಿಯ ಹೆಸರು | ಃ | ಶಾಂತಕುಮಾರ ಬಿ ಎಂ |
| ತಂದೆಯ/ಗಂಡನ ಹೆಸರು | ಃ | ಮರಿಯಪ್ಪ |
| ವಯಸ್ಸು | ಃ | 40 ವರ್ಷ |
| ಉದ್ಯೋಗ | ಃ | ಸಿಹೆಚ್‌ಸಿ |
| ವಾಸ ಸ್ಥಳ | ಃ | ತಿಪಟೂರು |

ಮುಖ್ಯ ವಿಚಾರಣೆ ಎಪಿಪಿಯವರಿಂದಃ

ನಾನು **20-02-2017** ರಿಂದ ದಿಃ **28-07-2019** ರವರೆಗೆ ತಿಪಟೂರು ಗ್ರಾಮಾಂತರ ವೃತ್ತ ಕಛೇರಿಯಲ್ಲಿ ಪೊಲೀಸ್ ಪೇದೆಯಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿಃ **12-05-2017** ರಂದು ಸಿಪಿಐ ರವರಾದ ಶ್ರೀ ಜಿ ಕೃಷ್ಣರಾಜು ರವರಿಗೆ ಕಿಬ್ಬನಹಳ್ಳಿ ಪೊಲಸೀಸ್ ಠಾಣಾ  ವ್ಯಾಪ್ತಿಯ ಅರಳಗುಪ್ಪೆ ಗ್ರಾಮದಲ್ಲಿ ಸಂಜೆ ಸುಮಾರು **6** ಗಂಟೆ ಸಮಯದಲ್ಲಿ ಸಿಬ್ಬಂಧಿಯವರಾದ ಫ್ರಾಸಾ **3,** ಮಧುಸೂಧನ್ ಮತ್ತು ನಾನು ಗಸ್ತಿನಲ್ಲಿದ್ದ ಸಮಯದಲ್ಲಿ ಸಿಪಿಐ ರವರಿಗೆ ಕೆ.ಬಬಿ ಕ್ರಾಸ್ ಪೊಲೀಸ್ ಠಾಣೇಯ ಶೆಟ್ಟಿಹಳ್ಳಿ ಗ್ರಾಮದ ಶಿವಣ್ಣ ರವರ ಪೆಟ್ಟಿಗೆಯಲ್ಲಿ ಅಕ್ರಮವಾಗಿ ಮದ್ಯವನ್ನು ಮಾರಾಟ ಮಾಡುತ್ತಿದ್ದಾರೆಂದು ಬಾತ್ಮಿದಾರರಿಂದ ಖಚಿಳಿತ ಮಾಹಿತಿ ಬಂದ ಮೇರೆಗೆ ಸಿಪಿಐ ರವರು ಪಂಚರಾದ ಚಾಸಾ-**2** ಮತ್ತು **3** ರವರಿಗೆ ಶೆಟ್ಟಿಹಳ್ಳಿ ಗ್ರಾಮದ ಸರ್ಕಾರಿ ಶಾಲೆಯ ಬಳಿ ಇರುವಂತೆ ತಿಳಿಸಿ ನಂತರ ಸಿಬ್ಬಂಧಿಯಾದ ನಮ್ಮೊಂದಿಗೆ ಸಂಜೆ **6-45** ಗಂಟೆಗೆ ಶೆಟ್ಟಿಹಳ್ಳಿ ಸರ್ಕಾರಿ ಶಾಲೆಯ ಬಳಿ ಬಂದಿದು ಸ್ಥಳದಿಂದ ಪಂಚರಿಗೆ ಸಿಪಿಐ ರವರು ಅಕ್ರಮ ಮದ್ಯ ಮಾರಾಟದ ಬಗೆ ಮಾಹಿತಿ ತಿಳಿಸಿ ದಾಳಿ ಮಾಡುವ ಸಮಯದಲ್ಲಿ ಪಂಚರಾಗಿ ಹಾಜರಿದ್ದು ಸಹಕರಿಸಬೇಕೆಂದು ಕೇಳಿಕೊಂಡ ನಂತರ ಪಂಚರು ಒಪ್ಪಿದ್ದು ಬಳಿದ ಕೆಎ-**06**-ಜಿ-**421** ಪೊಲೀಸ್ ಜೀಪಿನಲ್ಲಿ ಪಂಚರು ಮತ್ತು ಸಿಬ್ಬಂಧಿಯವರೊಂದಿಗೆ ಶೆಟ್ಟಿಹಳ್ಳಿ ಗ್ರಾಮದ ಶಿವಣ್ಣ ರವರ ಪೆಟ್ಟಿಗೆ ಅಂಗಡಿ ಬಳಿ ಸಂಜೆ **6-55** ಗಂಟೆಗೆ ಹೋಗಿದ್ದು ಅಂಗಡಿಯಲ್ಲಿ ಶಿವಣ್ಣ ರವರ ಮಗ ಕುಮಾರಸ್ವಾಮಿ ಎಂಬುವವರಿದ್ದು

ಅಕ್ರಮವಾಗಿ ಮಧ್ಯ ಮಾರಾಟ ಮಾಡುತ್ತಿದ್ದು ಮಧ್ಯ ಖರೀದಿಗೆ ನಿಂತಿದ್ದ ಮಧ್ಯ ವ್ಯಸನಿಗಳು ಪೊಲೀಸ್ ಜೀಪನ್ನು ಕಂಡ ಕೂಡಲೇ ಓಡಿ ಹೋದರು. ನಂತರ ಸಿಪಿಐ ರವರು ಅಂಗಡಿಯನ್ನು ಪರಿಶೀಲನೆ ಮಾಡಲಾಗಿ ಪೆಟ್ಟಿಗ ಅಂಗಡಿಯಲ್ಲಿ ಗಲ್ಲಾ ಪೆಟ್ಟಿಗೆಯ ಪಕ್ಕ ಒಂದು ರಟ್ಟಿನ ಬಾಕ್ಸ್ ಮತ್ತು ಹಣ ಇದ್ದು ಅದರಲ್ಲಿ **28** ಹೈವಾರ್ಡ ಟೆಟ್ರಾ ಪ್ಯಾಕೇಟ್ **90** ಎಂಎಲ್‌ನ ಟೆಟ್ರಾ ಪ್ಯಾಕೇಟ್ಸ ಗಳನ್ನು ಹಾಗೂ **1450** ರೂ. ಹಣ ಇತ್ತು ಅಂಗಡಿಯಲ್ಲಿದ್ದ ಮಧ್ಯ ಮಾರಾಟ ಮಾಡುವ ವ್ಯಕ್ತಿಯ ಪೂರ್ಣ ಹೆಸರು ವಿಳಾಸ ಕೇಸಲಾಗಿ ಕುಮಾರಸ್ವಾಮಿ ಬಿನ್ ಶಿವಣ್ಣ, **27** ವರ್ಷ, ಅಂಗಡಿ ವ್ಯಾಪಾರ, ಶೆಟ್ಟಿಹಳ್ಳಿ ಎಂದು ತಿಳಿಸಿದರು. ರಟ್ಟಿನ ಬಾಕ್ಸ್ ನಲ್ಲಿದ್ದ ಒಟ್ಟು **28** ಹೈವಾರ್ಡ ಪೈಕಿ ಟೆಟ್ರಾ ಪ್ಯಾಕೇಟ್ ಗಳು ಇದ್ದು ನಗರದು ಹಣ **1450** ರೂ. ಇತ್ತು. ಸಿಪಿಐ ರವರು ಆಸಾಮಿಯನ್ನು ಮಧ್ಯ ಮಾರಾಟ ಮಾಡಲು ಪರವಾನಿಗೆ ಇದೆಯ ಎಂದು ಕೇಳಲಾಗಿ ಯಾವುದೇ ಪರವಾನಿಗೆ ಇಲ್ಲ ಎಂದು ತಿಳಿಸಿದರು. ಆಸಾಮಿಯು ಅಕ್ರಮ ಹಣ ಸಂಪಾದನೆ ಮಾಡುವ ಸಲುವಾಗಿ ಅಕ್ರಮವಾಗಿ ಮಧ್ಯ ಮಾರಾಟ ಮಾಡುತ್ತಿರುವುದು ಕಂಡು ಬಂದಿದ್ದರಿಂದ ಆಸಾಮಿಯನ್ನು ವಶಕ್ಕೆ ಪಡೆದು **28** ಟೆಟ್ರಾ ಪ್ಯಾಕೇಟಿ ಮತ್ತು **1450** ರೂ. ನಗದು ಹಣವನ್ನು ಅಮಾನತ್ತು ಪಡಿಸಿಕೊಂಡು ಮಧ್ಯದ ಟೆಟ್ರಾ ಪ್ಯಾಕೇಟ್ಗಳ ಪೈಕಿ ಒಂದನ್ನು ರಾಸಾಯನಿಕ ಪರೀಕ್ಷೆಗೆ ಬಿಳಿ ಚೀಲದಲ್ಲಿ ಹಾಕಿ ಅದರ ಬಾಯನ್ನು ಕಟ್ಟಿ ಆರ್ ಎಂಬ ಅಕ್ಷರದಿಂದ ಸೀಲು ಮಾಡಿ ಮತ್ತು ಪಂಚ ಸಾಕ್ಷಿಗಳ ಸಹಿಯನ್ನು ಪಡೆದುಕೊಂಡು ಅದರ ಮೇರೆಗೆ ಅಂಟಿಸಿರುತ್ತೇವೆ. ಈ ಪಂಚನಾಮೆಯನ್ನು ದಿಃ **12-05-2017** ರಂದು ಸಂಜೆ **7** ರಿಂದ **7-45** ಗಂಟೆವರೆಗೆ ಅಂಗಡಿಯ ಲೈಟ್ ಬೆಳಕಿನಲ್ಲಿ ಬರೆಯಲಾಯಿತು. ಸದರಿ ಅಂಗಡಿಗೆ ಚೆಕ್ಕುಬಂಧಿ ಪೂರ್ವ ಮತ್ತು ಉತ್ತರಕ್ಕೆ ಖಾಲಿ ಜಗ, ಪಶ್ಚಿಮಕ್ಕೆ ಹಾಲಿನ ಡೈರಿಯ ಕಟ್ಟಡ, ದಕ್ಷಿಣಕ್ಕೆ ಮಣ್ಣಿನ ರಸ್ತೆ ಇರುತ್ತದೆ. ನಿಪಿ-**1** ರಲ್ಲಿರುವ ಸಾಕ್ಷಿಯ ಸಹಿಯನ್ನು ನೋಡಿ ಗುರುತಿಸಿರುತ್ತಾರೆ ಅದನ್ನು ನಿಪಿ**1(**ಡಿ**)** ಎಂದು ಗುರುತಿಸಲಾಗಿದೆ. ನನ್ನ ಜೊತೆ ನಿಪಿ-**1** ಕ್ಕೆ ಚಾಸಾ**4** ಮತ್ತು **6** ಮತ್ತು ಪಂಚ ಸಾಕ್ಷಿಗಳಾದ ಚಾಸಾ**2** ಮತ್ತು **3** ರವರು, ಚಾಸಾ-**1** ರವರು ಮತ್ತು ಆರೋಪಿ ಕೂಡ ಸಹಿ ಮಾಡಿರುತ್ತಾರೆ. ನ್ಯಾಯಾಲಯದ ಮುಂದೆ ಇರುವ ಆರೋಪಿಯನ್ನು ನೋಡಿ ಸಾಕ್ಷಿ ಗುರುತಿಸಿರುತ್ತಾರೆ. ನ್ಯಾಯಾಲಯದ ಮುಂದೆ ಇರುವ **1450** ರೂ. ಹಣವನ್ನು ಮತ್ತು ಎಂಓ-**1** ನ್ನು ನೋಡಿ ಸಾಕ್ಷಿ ಗುರುತಿಸಿರುತ್ತಾರೆ. ಈ ವಿಚಾರವಾಗಿ ನಾನು ಪೊಲೀಸರಿಗೆ ಹೇಳಿಕೆಯನ್ನು ಕೊಟ್ಟಿರುತ್ತೇನೆ.

ಪಾಟೀ ಸವಾಲು- ಶ್ರೀ ಬಿ ಎಂ ವಕೀಲರಿಂದಃ

ನಾವು ಘಟನೆಯೆಂದು ಹೇಳಲಾದ ದಿನ ಚಾಸಾ-**1** ರವರ ದಿನಚರಿಯ ಪುಸ್ತಕದಲ್ಲಿ ಎಲ್ಲೆಲ್ಲಿ ಗಸ್ತು ಮಾಡಿರುತ್ತೇವೆ ಎಂದು ನಮೂದಿರುತ್ತೇವೆ ಅದೇ ರೀತಿ ನಮ್ಮ ದಿನಚರಿ ನೋಟ್ ಪುಸ್ತಕದಲ್ಲಿ ಕೂಡ ಅದನ್ನು ಬರೆದಿರುತ್ತೇವೆ. ನಾವು ತಿಪಟೂರನ್ನು ಮಧ್ಯಾಹ್ನ **4** ಗಂಟೆ ಸಮಯಕ್ಕೆ ಬಿಟ್ಟಿರುತ್ತೇವೆ.

ಸಂಜೆ 4 ಗಂಟೆ ಸಮಯಕ್ಕೆ ಅರಳಗುಪ್ಪೆಯಲ್ಲಿ ಗಸ್ತು ಮಾಡಿರುತ್ತೇವೆ. 6-45 ಕ್ಕೆ ಶೆಟ್ಟಿಹಳ್ಳಿ ಗ್ರಾಮದಲ್ಲಿ ಗಸ್ತು ಮಾಡಿರುತ್ತೇವೆ ಅದು ಎರಡು ಗ್ರಾಮವನ್ನು ಬಿಟ್ಟು ಎಲ್ಲಾದರು ಗಸ್ತು ಮಾಡಿರುತ್ತೀರಾ ಎಂದರೆ ಸಾಕ್ಷಿ ಭೈರಾಪುರ, ಮಲ್ಲೆನಹಳ್ಳಿ, ಕುಪ್ಪಾಳು ಇತರೆ ಗ್ರಾಮಗಳಲ್ಲಿ ಗಸ್ತನ್ನು ಮಾಡಿರುತ್ತೇವೆ. ಭೈರಪುರಕ್ಕೆ ಎಷ್ಟು ಗಂಟೆಗೆ ಹೋಗಿರುತ್ತೇವೆ ಎನ್ನುವುದು ಈಗ ನನಗೆ ನೆನಪಿಲ್ಲ. ಅರಳಗುಪ್ಪೆಯಿಂದ ಭೈರಾಪುರಕ್ಕೆ 3 ರಿಂದ 4 ಕಿ.ಮೀ ದೂರ ಇದೆ. ನಾವು ಸ್ಥಳಕ್ಕೆ ಹೋಗುವ ಸಮಯಕ್ಕೆ ಚಾಸಾ-2 ಮತ್ತು 3 ರವರು ಅಲ್ಲಿಗೆ ಬಂದಿರುತ್ತಾರೆ. ಚಾಸಾ-1 ರವರು ಈ ಕೇಸಿನಲ್ಲಿ ಪಂಚ ಸಾಕ್ಷಿಯಾಗಿ ಬರಲು ಚಾಸಾ-2 ಮತ್ತು 3 ರವರಿಗೆ ಮೌಖಿಕವಾಗಿ ಆದೇಶ ಮಾಡಿರುತ್ತಾರೆ ನಾವು ಗಸ್ತು ಮಾಡಲು ಸರ್ಕಾರಿ ವಾಹನದಲ್ಲಿ ಹೋಗಿರುತ್ತೇವೆ. ಕೆಎ-06-ಜಿ-421 ಚಾಸಾ-1 ರವರಾದ ವಾಹನ ನಾವು ಅದರಲ್ಲೆ ಅವರ ಜೊತೆ ಗಸ್ತಿಗೆ ಹೋಗಿರುತ್ತೇವೆ. ನಮ್ಮ ಜೊತೆ ಚಾಸಾ-1 ರವರು ಎಲ್ಲಾ ಗಸ್ತಿಗೆ ಬಂದಿರುತ್ತಾರೆ. ನಾನಾು ದಿಃ 12-05-2017 ರಂದು ಗಸ್ತಿಗೆ ಹೋಗಿಲ್ಲ ಅಲ್ಲಿಂದ ಆರೋಪಿ ವಶದಿಂದ 28 ಹೈ ವರ್ಡ ಚಿಯರ್ಸ ವಿಸ್ಕಿ ಟೆಟ್ರಾ ಪ್ಯಾಕೇಟ್ ಗಳನ್ನು ವಶಕ್ಕೆ ಪಡೆದಿಲ್ಲ ಎಂದರೆ ಸರಿಯಲ್ಲ. ನ್ಯಾಯಾಲಯದ ಮುಂದೆ ಇರುವ ಎಂ.ಓ-1 ಮತ್ತು ಇತರ 27 ಟೆಟ್ರಾ ಪ್ಯಾಕೇಟ್ ಗಳ ಬಗ್ಗೆ ವಿಶೇಷ ಗುರುತನ್ನು ಟೆಟ್ರಾ ಪ್ಯಾಕೇಟ್ ಗಳ ಮೇಲೆ ಬರೆದಿರುವುದಿಲ್ಲ. ನಾವು ಅಮಾನತ್ತು ಪಡಿಸಿಕೊಂಡಿರುವ ಹಣದ ಡಿನಾಮಿನೇಷನನ್ನು ನಿಪಿ-1 ರಲ್ಲಿ ಬರೆದಿರುವುದಿಲ್ಲ. ಶೆಟ್ಟಿಹಳ್ಳಿಯಲ್ಲಿ 700-800 ಜನರು ವಾಸ ಮಾಡುವ ಗ್ರಾಮ ಎಂದರೆ 50 ರಿಂದ 100 ಮನೆಗಳು ಇರುವ ಗ್ರಾಮ ವಾಗಿರುತ್ತದೆ. ಹಣವನ್ನು ಅಮಾನತ್ತು ಪಡಿಸಿಕೊಂಡಿರುವ ಪೆಟ್ಟಿಗೆ ಕಬ್ಬಿಣದ ಪೆಟ್ಟಿಗೆ ಆಗಿರುತ್ತದೆ ಆದರೆ ಸದರಿ ಕಬ್ಬಿಣದ ಪೆಟ್ಟಿಗೆಯನ್ನು ನಾವು ಅಮಾನತ್ತು ಪಡಿಸಿಕೊಂಡಿರುವುದಿಲ್ಲ. ನಾನು ನಿಪಿ-1 ನ್ನು ಠಾಣೆಯಲ್ಲಿ ಬರೆದು ಠಾಣೆಯ ಅಂಕಿ ಅಂಶಕ್ಕೋಸ್ಕರ ಈ ಕೇಸನ್ನು ಚಾಸಾ-1 ರವರ ಜೊತೆ ಶಾಮಿಲಾಗಿ ಸುಳ್ಳು ಸಾಕ್ಷ್ಯನುಡಿತಾ ಇದ್ದೀನಿ ಎಂದರೆ ಸರಿಯಲ್ಲ. ಸದರಿ ಅಂಗಡಿ ಆರೋಪಿಗೆ ಸಂಬಂಧಪಟ್ಟಿದ್ದು ಎಂದು ತೋರಿಸಲು ಯಾವುದೇ ದಾಖಲಾತಿಗಳನ್ನು ಆರೋಪಿಯಿಂದ ಗಸ್ತು ಮಾಡುವ ದಿನ ಯವುದು ನಾವು ಅಮಾನತ್ತು ಪಡಿಸಿಕೊಂಡಿರುವುದಿಲ್ಲ.

ಮರು ವಿಚಾರಣೆ - ಇರುವುದಿಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕರಿಸಿ ಓದಿ ಹೇಳಿ, ಕೇಳಿದಾಗ ಸರಿ ಇದೆ ಎಂದು ಒಪ್ಪಿರುತ್ತಾರೆ.)

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ
ತಿಪಟೂರು.